ಸಿಡಬ್ಲ್ಯೂ13, ಪಿಡಬ್ಲ್ಯೂ8

## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 67/2019

**ಸಾಕ್ಷಿಯನ್ನು ದಿಃ 01.08.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ.ಎಸ್ ವಕೀಲರಿಂದಃ**

ನಿಪಿ. 1 ರ ದೂರನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮಹಜರ್ ಬರೆಯುವ ಸಂಬಂಧ ಪಂಚಾಯಿತಿದಾರರಿಗೆ ನೊಟೀಸು ಕೊಟ್ಟಿದ್ದೆ. ನೊಟೀಸನ್ನು 3.00 ಗಂಟೆಗೆ ನೀಡಿದ್ದೆ. ಸದರಿ ನೋಟೀಸಿನಲ್ಲಿ ಮಹಜರ್ ನ ಸಮಯವನ್ನು ನಮೂದಿಸಿರಲಿಲ್ಲ. ಸಮಯವನ್ನು ನಮೂದಿಸಲು ತೊಂದರೆ ಇರಲಿಲ್ಲ. ನೊಟೀಸನ್ನು ಚಾಸಾ 1, 4 ಮತ್ತು 5 ರವರಿಗೆ ಕೊಟ್ಟಿದ್ದೆ. ನೊಟೀಸು ಕೊಟ್ಟಿರುವ ಪ್ರತಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ಸದರಿ ನೊಟೀಸು ಪ್ರತಿಗಳು ನ್ಯಾಯಾಲಯದ ಕಡತದಲ್ಲಿ ಇವೆಯಾ ಪರಿಶೀಲಿಸಿ ಹೇಳಿ ಎಂದಾಗ ಸಾಕ್ಷಿ ನ್ಯಾಯಾಲಯದ ಕಡತವನ್ನು ಪರಿಶೀಲಿಸಿ ಇದರಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಒಂದು ವೇಳೆ ನಾನು ನೊಟೀಸು ಕೊಟ್ಟಿದ್ದರೆ ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿದ್ದೆ ಎಂದರೆ ಸರಿ. ಮಹಜರ್ ಅನ್ನು 3.30 ರಿಂದ 4.00 ಗಂಟೆ ವರೆಗೆ ಮಾಡಿದ್ದೆ. ಮಹಜರ್ ಕಾಲಕ್ಕೆ ಏನೇನು ಉಪಕರಣಗಳನ್ನು ತೆಗೆದುಕೊಂಡು ಹೋಗಿದ್ದೆ ಎಂಬ ಪ್ರಶ್ನೆಗೆ ಸಾಕ್ಷಿಯು ಪೇಪರ್ ಮತ್ತು ಸೀಲ್ ತೆಗೆದುಕೊಂಡು ಹೋಗಿದ್ದೆ ಎನ್ನುತ್ತಾರೆ. ಸಾಕ್ಷಿದಾರರ ಹೇಳಿಕೆಗಳನ್ನು 4.30 ಗಂಟೆಯಿಂದ 5.00 ಗಂಟೆಯವರೆಗೆ ಸ್ಥಳದಲ್ಲೆ ಪಡೆದುಕೊಂಡೆ. ಹೇಳಿಕೆಗಳನ್ನು ಕೈನಲ್ಲೆ ಬರೆದುಕೊಂಡಿರುತ್ತೇನೆ. ಕೈ ನಲ್ಲಿ ಬರೆದುಕೊಂಡಿರುವ ಹೇಳಿಕೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ, ಟೈಪ್ ಮಾಡಿ ಹಾಜರು ಪಡಿಸಿದ್ದೇನೆ. ನಾನು ಕೈ ಯಲ್ಲಿ ಬರೆದುಕೊಂಡೆ ಎಂದು ಹೇಳಿದ ಹೇಳಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ. ಯಾವ ವಾಹನ ಅಪಘಾತ ಪಡಿಸಿತು ಎಂದು ನಾನು ಮಹಜರ್ ನಲ್ಲಿ ನಮೂದು ಮಾಡಿದ್ದೇನೆ.

ಸಿಟಿ 100 ಪ್ಯಾಷನ್ ಪ್ಲಸ್ ಬೈಕ್ ಎಂದು ನಾನು ಮಹಜರ್ ನಲ್ಲಿ ನಮೂದಿಸಿದ್ದೆನೆ. ನಾನು ಸ್ಥಳಕ್ಕೆ ಭೇಟಿ ಕೊಟ್ಟಿದ್ದರೆ ವಾಹನದ ಹಾಗೂ ಆ ಸ್ಥಳದ ಸಂಪೂರ್ಣ ಮಾಹಿತಿ ತಿಳಿದಿರುತ್ತಿತ್ತು ಎಂದರೆ ನಾನು ಹೋಗಿದ್ದೆ ಎನ್ನುತ್ತಾರೆ. ನಾನು ಸ್ಥಳಕ್ಕೆ ಹೋಗಿದ್ದೆ ಎಂದು ಹೇಳಿದ್ದು ಸ್ಥಳದಲ್ಲಿ ವಾಹನ ಯಾವ ಪರಿಸ್ಥಿತಿಯಲ್ಲಿತ್ತು ಎಂದು ಫೊಟೋ ತಗೆಸಿದ್ದೆ, ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನಾನು ಫೋಟೋ ತೆಗೆಯಬೇಕಾದರೆ ಅಲ್ಲಿ ಒಂದೆ ವಾಹನ ಇತ್ತು. ನಾನು ತೆಗೆದೇ ಎನ್ನಲಾದ ಫೋಟೋದಲ್ಲಿ ಬೈಕ್ ಇದೆ. ನಿಪಿ. 3 ಮತ್ತು ನಿಡಿ.1 ರ ಫೋಟೊಗಳನ್ನು ಬಿಳಿಕೆರೆ ಪೊಲೀಸ್ ಠಾಣಾ ಆವರಣದಲ್ಲಿ ತೆಗೆಯಲಾಗಿದೆ ಎಂದರೆ ಸರಿಯಲ್ಲ, ಸ್ಥಳದಲ್ಲೆ ತೆಗೆಯಲಾಗಿದೆ. ಪ್ಯಾಷನ್ ಪ್ಲಸ್ ಎಂಬ ಕಂಪನಿಯೆ ಬೇರೆ ಬಜಾಜ್ ಕಂಪನಿಯೇ ಬೇರೆ ಎಂದರೆ ಸರಿ. ನಾನು ತೆಗೆಸಿರುವ ನಿಡಿ. 1 ರ ಫೋಟೋ ದಲ್ಲಿ ಬಜಾಜ್ ಎಂದಿದೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿ ಮಹಜರ್ ಮಾಡಿದ್ದರೆ ಯಾವ ವಾಹನ ಮತ್ತು ಯಾವ ಕಂಪನಿಯದ್ದೂ ಎಂದು ಗೊತ್ತಾಗುತಿತ್ತು ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಸ್ಥಳದಲ್ಲಿ ಮಹಜರ್ ಮಾಡಿಲ್ಲ ಆದ್ದರಿಂದ ವಾಹನದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ರಕ್ತದ ಕಲೆ ಇರಲಿಲ್ಲ. ಸಮಾನ್ಯವಾಗಿ ಹಳ್ಳಿ ರಸ್ತೆಯಲ್ಲಿ ತಗ್ಗು-ದಿಣ್ಣೆ ಹಳ್ಳ -ಕೊಳ್ಳಗಳು ಇರುತ್ತವೆ ಎಂದರೆ ಸರಿ. ರತ್ನಪುರಿ ಮತ್ತು ಉದ್ದೂರು ರಸ್ತೆ ತುಂಬಾ ಹಳೆಯ ರಸ್ತೆ ಎಂದರೆ ಸರಿ, ಡಾಂಬರ್ ಇತ್ತು. ಅದರಲ್ಲಿ ಅಲಲ್ಲಿ ಹಳ್ಳ -ಕೊಳ್ಳಗಳು ಬಿದ್ದಿದ್ದವು ಎಂದರೆ ಸರಿ. ಅಪಘಾತ ನಡೆದಿದೆ ಎನ್ನಲಾದ ಸ್ಥಳಕ್ಕೂ ಮತ್ತು ವಾಹನ ನಿಂತಿತ್ತು ಎನ್ನಲಾದ ಸ್ಥಳಕ್ಕೂ ಎಷ್ಟು ಅಂತರ ಇತ್ತು ಎಂದು ನಾನು ಇಲ್ಲಿಯೂ ನಮೂನಿಸಿಲ್ಲ.

ಅಪಘಾತ ನಡೆದಿದೆ ಎನ್ನಲಾದ ಸ್ಥಳದಿಂದ ವಾಹನ ಇತ್ತು ಎನ್ನಲಾದ ಸ್ಥಳಕ್ಕೆ ಯಾವ ರೀತಿ ಹೋಯಿತು ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ತನಿಖೆ ಮಾಡಿಲ್ಲ. ಅಪಘಾತ ನಡೆದಿದೆ ಎನ್ನಲಾದ ಸ್ಥಳದಲ್ಲಿ ರಸ್ತೆಯ ಪಕ್ಕ 5 ಅಡಿಯ ಪುಟ್ ಪಾತ್ ಇತ್ತು. ಪುಟ್ ಪಾತ್ ಇರುವುದು ಪಾದಾಚಾರಿ ಬಳಕೆಗೆ ಎಂದರೆ ಸರಿ. ಪುಟ್ ಪಾತ್ ಸೇರಿದಂತೆ ಅದರ ಅಂಚಿನಿಂದ ಅಪಘಾತವಾದ ಸ್ಥಳ 14 ಅಡಿ ಅಂತರದಲ್ಲಿ ಇತ್ತು. ನಾನು ತಯಾರಿಸಿರುವ ನಕ್ಷೆಯಲ್ಲಿ ಪುಟ್ ಪಾತ್ 1 ಅಡಿ ಎಂದು ನಮೂದು ಮಾಡಿಲ್ಲ 5 ಅಡಿ ಎಂದು ಮಾಡಿದ್ದೇನೆ ಆ ರೀತಿ 1 ಅಡಿ ಪುಟ್ ಪಾತ್ ಎಂದು ಮಾಡಿದ್ದರೆ ಅದು ಸುಳ್ಳು ಎಂದರೆ ಸರಿ. ನಾನು ಸ್ಥಳದಲ್ಲಿ

ಯಾವುದೆ ಮಹಜರ್ ಮಾಡಿಲ್ಲ, ಮತ್ತು ಸ್ಥಳದಿಂದ ಯಾವುದೆ ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ತಪ್ಪಿನಿಂದ ಈ ಅಪಘಾತವಾಗಿಲ್ಲ ಸುಳ್ಳು ದಾಖಲೆಗಳನ್ನು ಸೃಷ್ಟಿ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾಮಶೆಟ್ಟಿಯ ಹೇಳಿಕೆ ಹಾಜರು ಪಡಿಸಿದ್ದೇನಾ ಎಂದರೆ ಅವರ ಮಗನ ಹೇಳಿಕೆ ಪಡೆದುಕೊಂಡಿದ್ದೇನೆ ಎನ್ನುತ್ತಾರೆ. ದೂರು ಸ್ವೀಕರಿಸಿದೆ ಎಂದು ಹೇಳಿದ್ದು, ಆನಂತರ ಗಾಯಾಳುಗಳ ಹೇಳಿಕೆ ಪಡೆದುಕೊಳ್ಳಲು ಪ್ರಯತ್ನಿಸಿಲ್ಲ. ಗಾಯಾಳುಗಳ ಹೇಳಿಕೆ ಪಡೆದುಕೊಂಡಿದ್ದಲ್ಲಿ ಅಪಘಾತ ಯಾವ ರೀತಿ ಆಗಿತ್ತು ಎಂದು ಗೊತ್ತಾಗುತ್ತಿತ್ತು ಎಂದರೆ ಸರಿ. ಆರೋಪಿಗೆ ಸಿ.ಆರ್.ಪಿ.ಸಿ ಕಲಂ 41 ಅಡಿ ನೊಟೀಸು ನೀಡಿ ಅವರನ್ನು ಬಿಡುಗಡೆ ಮಾಡಿದ್ದೇನೆ ಎಂದು ಹೇಳಿದ್ದು, ಆರೋಪಿಗೆ ಖಾಲಿ ಹಾಳೆಗೆ ಸಹಿ ಪಡೆದುಕೊಂಡು ನನ್ನ ಇಷ್ಟಾನುಸಾರ ದಾಖಲೆ ಸೃಷ್ಟಿಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಪ್ರಕರಣಗಳಲ್ಲೆ ಅರ್ಜಿದಾರರು ಪರಿಹಾರಕ್ಕೆ ಅರ್ಜಿ ಸಲಿಸ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರಿಗೆ ಪರಿಹಾರ ಪಡೆಯಲು ಅನುಕೂಲವಾಗಲಿ ಎಂದು ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.